ಎಳೆದನಂತೆ. ಅವಳ ಸುತ್ತ ಜಮಾಯಿಸಿದ ಜನರಲ್ಲಿ ಒಬ್ಬ ಎರಡು ಮೂರು ಬಾರಿ ಶಿವಶಂಕರನನ್ನೇ ನೋಡಿದಾಗ ಇವನ ಕಾಲುಗಳಲ್ಲಿ ನಡುಕ ಹುಟ್ಟಿಕೊಂಡಿತು. ಅದೇ ಹೊತ್ತಿಗೆ ಪೋಲೀಸ್ ವ್ಯಾನೊಂದು ಹಾದುಹೋದದ್ದು ಅವನ ಭ್ರಮೆ ಇರಲಿಕ್ಕಿಲ್ಲ.

ಮಾರನೆಯ ದಿನ ಬೆಳಗ್ಗೆ ಯಾರಿಗಾದರೂ ಯಾವುದಕ್ಕಾದರೂ ಬದುಕಿದರೆ ಮಾತ್ರ ಈ ಬಾಳಿಗೆ ಬೆಲೆ ಎಂಡುಕೊಂಡವನು, ಒಂದು ಏರುದಾರಿಯಲ್ಲಿ ಹೋಗುತ್ತಿರುವಾಗ ತುಂಬಾ ಹಳೆಯ ಮನೆಗಳ ಒಂದು ಸಾಲು ಕಾಣಿಸಿತು. ಒಂದು ಮನೆಯಲ್ಲಿ, ಹಾಡುಹಗಲಾಗಿದ್ದೂ, ಎಲ್ಲಾ ರೂಮುಗಳಲ್ಲಿ ದೀಪಗಳು ಉರಿಯುತ್ತಿದ್ದವು. ಹಜಾರವನ್ನು ತೋರಿಸುತ್ತಿದ್ದ ಇನ್ನೊಂದು ಮನೆಯ ರೂಮಿನಲ್ಲಿ ಅನೇಕ ಪುಸ್ತಕಗಳಿದ್ದ ಒಂದು ಟೇಬಲಿನ ಬಳಿ ಒಬ್ಬ ಮನುಷ್ಯ ಪುಸ್ತಕವೊಂದನ್ನು ಹಿಡಿದುಕೊಂಡು ಕೂತಿದ್ದ. ಅವನು ಓದುತ್ತಿದ್ದಕ್ಕಿಂತ ಹೆಚ್ಚಾಗಿ ಪುಸ್ತಕವನ್ನೇ ನೋಡುತ್ತಿದ್ದ ಹಾಗಿತ್ತು. ಶಿವಶಂಕರ ಅಲ್ಲಿಂದ ಹತ್ತು ಹೆಜ್ಜೆ ಹಾಕಿದ ಮೇಲೆ ಎಡಗಡೆಯ ಮನೆಯೊಂದರ ಹಾಲಿನಲ್ಲಿದ್ದ ಟೀವಿಯಲ್ಲಿ ಕಣ್ಣೀರು ಸುರಿಸುತ್ತಿರುವ ಒಂದು ಮುಖವಿತ್ತು. ಆಮೇಲೆ ಹೊಸದೊಂದು ಅವೆನ್ಯೂ ತಲುಪಿದಾಗ ಇಷ್ಟು ದೂರ ಯಾಕೆ ನಡೆದುಕೊಂಡು ಬಂದೆ ಎಂದು ಯೋಚಿಸಿದ. ಆ ಅವೆನ್ಯೂದಲ್ಲಿ ಒಂದು ಬಸ್‌ಸ್ಟಾಪಿನ ಬಳಿ ನೆರೆದಿದ್ದವರೆಲ್ಲರ ಮುಖದಲ್ಲೂ ಅದೇನೋ ಬೇಸರ, ವಿಷಾದ ತುಳುಕುತ್ತಿದ್ದವು. ತನ್ನ ಮುಖವೂ ಹಾಗೆಯೇ ಇರಬಹುದೆಂದು ಅನ್ನಿಸಿ ಆ ಅವೆನ್ಯೂ ದಾಟಿಕೊಂಡು ಬಿರಬಿರನೆ ನಡೆಯುತ್ತ ಇನ್ನೊಂದು ಬೀದಿಗೆ ತಿರುಗಿ, ಆ ಬೀದಿಯಲ್ಲಿ ಒಂದು ಮನೆ ಎದುರಿಗಿದ್ದ ಸಂಪಿಗೆ ಮರದ ಕೆಳಗೆ ಸ್ವಲ್ಪ ಹೊತ್ತು ನಿಂತ. ತಂಗಾಳಿಯಿಂದಾಗಿ ಸುತ್ತಲೂ ಹರಡುತ್ತಿದ್ದ ಸಂಪಿಗೆಯ ಪರಿಮಳ. ಅಂದು ಮುಂಜಾನೆಯಷ್ಟೇ ಬಿದ್ದಿದ್ದ ಮಳೆಯಿಂದಾಗಿ ನೀರಿನ್ನೂ ಇಂಗದ ಸಣ್ಣ ಸಣ್ಣ ಗುಂಡಿಗಳು. ದಿಗಂತಕ್ಕೆ ತೆರೆಯೆಳೆದಂತೆ ಒಂದಕ್ಕೊಂದು ಅಂಟಿಕೊಂಡು ನಿಂತು ಹಸಿರು ಚೆಲ್ಲುತ್ತಿರುವ ಮರಗಳು. ಅವುಗಳನ್ನು ಕೆಣಕಬೇಕೆಂದೇ ಮೋಡಗಳ ಆಟ ಆಡಿಸುತ್ತಿರುವ ಆಕಾಶ. ಬಿಸಿಲು ಬೀಳುತ್ತಿದ್ದ ಇನ್ನೊಂದು ಮನೆಯ ಜಗಲಿಯಲ್ಲಿ ಬೆಕ್ಕೊಂದು ತೂಕಡಿಸುತ್ತಿತ್ತು.

ಅವನು ಹಾಗೇ ನಡೆದುಕೊಂಡು ಹೋಗಿ ಒಂದು ರಸ್ತೆಯನ್ನು ಮುಟ್ಟಿದಾಗ ಅದು ಜನರಿಲ್ಲದೆ ಖಾಲಿಯಾಗಿತ್ತು. ಸಣ್ಣಗೆ ಜಿನುಗತೊಡಗಿದ ಮಳೆಯಲ್ಲಿ ಬೀದಿ ದೀಪಗಳು ಸರಿಯಾಗಿ ಬೆಳಕು ಕೊಡಲಾಗುತ್ತಿಲ್ಲವೆಂದು ನರಳುತ್ತಿದ್ದವು. ಎರಡೂ ಕಡೆ ಅಲ್ಲಲ್ಲಿ ಮಾತ್ರ ಒಂದೋ ಎರಡೋ ಮಹಡಿಗಳಿದ್ದ, ಬಹುಮಟ್ಟಿಗೆ ತಗ್ಗುತಗ್ಗಾಗಿದ್ದ ಒಂದಕ್ಕೊಂಡು ಅಂಟಿಕೊಂಡು ಕೂತಂತಿದ್ದ ಮನೆಗಳು. ಬಗೆಬಗೆಯ ಚಿತ್ತಾರಗಳ ಮುಂಬಾಗಿಲುಗಳಿದ್ದ ಆ ಮನೆಗಳಿಗೆ ತೊನೆದಾಡುವ ಹಸಿರು ಗಿಡಗಳಿದ್ದ ಕಾಂಪೌಂಡುಗಳು. ಹತ್ತು ಹೆಜ್ಜೆ ದೂರದಲ್ಲಿದ್ದ ಒಂದು ಮನೆಯ ಆಳೆತ್ತರದ ಕಾಂಪೌಂಡಿನ ಮೇಲೆ ಉದ್ದಕ್ಕೂ ಅಂಟಿಸಿದ್ದ ಗಾಜಿನ ಚೂರುಗಳು ಚೂಪಾದ ಕೋರೆಹಲ್ಲುಗಳಂತೆ ಕಾಣುತ್ತಿದ್ದವು. ಆಮೇಲೆ ಅದೇ ರಸ್ತೆಯಲ್ಲಿ ನೆನಪುಗಳ ಭಾರದಿಂದ, ಹಗಲುಗನಸುಗಳ ಗಲಿಬಿಲಿಯಿಂದ ತುಂಬಾ ಹೊತ್ತು ನಡೆದುಕೊಂಡು ಹೋಗುತ್ತಿರುವಾಗ ಅವನನ್ನು ಮತ್ತೆ ಮತ್ತೆ ತನ್ನ ಇರವಿನಿಂದ ಸೆಳೆದುಕೊಳ್ಳುತ್ತಿದ್ದ ಆ ಮನೆ ಕಣ್ಣೆದುರಿಗೆ ಬಂದಂತಾಯಿತು.

ಅವನು ನಿಂತಲ್ಲಿಂದ ಅಷ್ಟೇನೂ ದೂರದಲ್ಲಿರಲಿಲ್ಲ ಆ ಮನೆ. ಹೌದು, ಸರ್ಕಲ್ಲಿನಿಂದ ಅರ್ಧ ಫರ್ಲಾಂಗ್ ಕೂಡ ದೂರವಿಲ್ಲ. ಇದ್ದಕ್ಕಿದ್ದಂತೆ ಕಾಣಿಸಿಕೊಂಡ ಕಾಂಪೌಂಡಿನ ಗೇಟು ಮನೆಯ ಮುಂಬಾಗಿಲಿನವರೆಗೆ ಹುಲ್ಲು ತುಳಿದೂ ತುಳಿದೂ ಬತ್ತಲಾದ ಕಾಲುದಾರಿಯನ್ನು ತೋರಿಸುತ್ತಿತ್ತು.

ಆ ಮನೆ ಅವನು ತಿಳಿದುಕೊಂಡಿದ್ದಕ್ಕಿಂತಲೂ ಸಣ್ಣದೇ. ತೇಗದ ಮರದಿಂದ ತಯಾರಾದ ಹೆಬ್ಬಾಗಿಲಿಗೆ ಮೇಲಿಂದ ಕೆಳಗಿನವರೆಗೂ ಕೊರೆದ ಬಳ್ಳಿಗಳು. ಹಜಾರ, ದೊಡ್ಡ ನಡುಮನೆ, ನಾಲ್ಕಾರು ರೂಮುಗಳಿದ್ದ ಮನೆಯೇನೊ. ಬೀದಿಯ ಕಡೆಗೇ ಇದ್ದ ದೊಡ್ಡ ದೊಡ್ಡ ಕಿಟಕಿಗಳ ಹಿಂದೆ ರೂಮುಗಳಿದ್ದಿರಬೇಕು. ಎಡಭಾಗದ ಕಿಟಕಿಯಲ್ಲಿ ಕಾಣಿಸಿದ, ಮರದಿಂದಲೇ ತಯಾರಾದ ಸ್ಟೇರ್‌ಕೇಸು ಮೇಲುಮೇಲಕ್ಕೇರುತ್ತ ಮಹಡಿಯಲ್ಲಿ ಮಾಯವಾಗಿತ್ತು. ಹೆಬ್ಬಾಗಿಲಲ್ಲಿ ಅವೇ ಮೂರು ಮೆಟ್ಟಿಲುಗಳು; ಬಲ ಭಾಗದಲ್ಲಿ ಕಿತ್ತುಹೋಗಿದ್ದ ಅದೇ ಮಧ್ಯದ ಮೆಟ್ಟಿಲು.

ಶಿವಶಂಕರ ಯೋಚಿಸಿದ: ಸುಮಾರು ಮೂರು ಅಡಿ ಅಗಲವಿರುವ ಮೂರೇ ಮೆಟ್ಟಿಲುಗಳು.